**SRUJANI**

ISSN: 2583-3510

**Indian Journal of Innovative Research and Development (SIJIRD)**

**Volume-1 (01), March-April 2022, Pp. 29-35**

**Bi-Monthly, Peer-Reviewed, Open Access, Indexed Journal**

srujanifoundation@gmail.com

editor@srujani.in

www.srujani.in

# ಬಳ್ಳಾರಿ ನಗರದ ಪ್ರಾಚೀನ ಬಾವಿಗಳು: ಒಂದು ಅಧ್ಯಯನ

**ಗಂಗೋತ್ರಿ ವಿ***

*ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.

***Abstract:***

ಕರ್ನಾಟಕದ ಚರಿತ್ರೆಯಲ್ಲಿ ಬಳ್ಳಾರಿ ಜಿಲ್ಲೆಗೆ ತನ್ನದೇ ಅದ ವಿಶಿಷ್ಟ ಸ್ಥಾನವಿದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಚಾರಿತ್ರಿಕವಾಗಿ ಜಿಲ್ಲೆಗೆ ಹೆಚ್ಚಿನ ಪ್ರಾಮುಖ್ಯತೆ ಒದಗಿ ಬಂದಿತು. ಮೌರ್ಯರು, ಶಾತವಾಹನರು, ಕದಂಬರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು, ವಿಜಯನಗರ ಅರಸರು, ಮೈಸೂರು ಒಡೆಯರು ಮತ್ತು ಹಲವಾರು ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟಿತ್ತು. ಭಾರತಕ್ಕೆ ಸ್ವಾತಂತ್ರ್ಯ ಸಿಗುವವರೆಗೂ ಈ ಪ್ರದೇಶವು ಬ್ರಿಟಿಷರ ಆಡಳಿತದ ಮದ್ರಾಸ್ ಪ್ರೆಸಿಡೆನ್ಸಿಯಾ ಭಾಗವಾಗಿತ್ತು. ಬಳ್ಳಾರಿ ಜಿಲ್ಲೆಯ ಇತಿಹಾಸ ಕ್ರಿ.ಪೂ. 3500 ರಿಂದ ಅಂದರೆ ಹಳೇ ಶಿಲಾಯುಗದ ಕಾಲಘಟ್ಟದಿಂದಲೂ ತಿಳಿದುಬರುತ್ತದೆ. ಈ ಹಳೆ ಶಿಲಾಯುಗದ ಜನರ ಸಂಸ್ಕೃತಿ ನೆಲೆಗಳನ್ನು ಅನೇಕ ವಿದ್ವಾಂಸರು ಶೋಧಿಸಿದ್ದಾರೆ. ನಂತರ ಈ ಸಂಸ್ಥಾನಗಳು ತಮ್ಮ ತಮ್ಮ ಕಾಲಾವಧಿಯಲ್ಲಿ ಅನೇಕ ಸ್ಮಾರಕಗಳನ್ನು ಕಟ್ಟಿದ್ದಾರೆ. ಅವುಗಳಲ್ಲಿ ಬಾವಿಗಳು ಕೂಡ ಮುಖ್ಯವಾಗಿದ್ದು, ಪ್ರಸ್ತುತ ಲೇಖನದಲ್ಲಿ ಬಳ್ಳಾರಿ ನಗರದಲ್ಲಿರುವ ಪ್ರಾಚೀನ ಬಾವಿಗಳ ಬಗ್ಗೆ ಅಧ್ಯಯನ ನಡೆಸಲಾಗಿದೆ.

***Key Words:*** ಬಳ್ಳಾರಿ, ಬಾವಿಗಳು, ವಿಜಯನಗರ, ಅರಸು ಮನೆತನ, ಪಾಳೆಗಾರರು.

**ಪೀಠಿಕೆ**

ಪ್ರಾಗೈತಿಹಾಸಿಕ ಕಾಲದಿಂದಲೂ ಗುರುತಿಸಿಕೊಳ್ಳುವ ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಐತಿಹಾಸಿಕ ಕುರುಹುಗಳು ಜಿಲ್ಲೆಯ ಸಂಗನಕಲ್ಲು, ತೆಕ್ಕಲಕೋಟೆ, ಕಪ್ಪಗಲ್ಲು, ಕುಡುತಿನಿ ಇನ್ನು ಮುಂತಾದ ಪ್ರದೇಶಗಳಲ್ಲಿ ಕಂಡು ಬರುತ್ತವೆ. ಇತಿಹಾಸ ಕಾಲಘಟ್ಟಕ್ಕೆ ಬಂದಾಗ ಮೌರ್ಯರಿಂದ ವಿಜಯನಗರ ಕಾಲಘಟ್ಟದವರೆಗೆ ಇವರ ಆಳ್ವಿಕೆಗೆ ಸಂಬಂಧಿಸಿದ ಕುರುಹುಗಳು ಜಿಲ್ಲೆಯಲ್ಲಿ ಅನೇಕ ಕಡೆ ಕಂಡು ಬರುತ್ತವೆ. ವಿಜಯನಗರ ಕಾಲಘಟ್ಟದ ನಂತರ ಪಾಳೆಯಗಾರರು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದ್ದಾರೆ. ಇದೇ ಸಂದರ್ಭದಲ್ಲಿ ಈ ಪ್ರದೇಶವನ್ನು ಬ್ರಿಟಿಷರು ವಶಪಡಿಸಿಕೊಂಡ ಮೇಲೆ ಇದು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರುತ್ತದೆ. ಇತಿಹಾಸದ ಸಂಸ್ಕೃತಿಯ ಪ್ರತೀಕದಂತಿರುವ ಬಾವಿಗಳ ಇತಿಹಾಸ ಹುಡುಕುತ್ತಾ ಹೋದರೆ ಕನಿಷ್ಠ ಸಾವಿರ ವರ್ಷಗಳ ಹಿಂದಕ್ಕೆ ಹೋಗಬೇಕಾಗುತ್ತದೆ. ನಾಗರಿಕತೆಗಳ ಅನಿವಾರ್ಯಗಳಲ್ಲಿ ಒಂದಾಗಿದ್ದ ಬಾವಿಗಳನ್ನು ಅವಲಂಬಿಸಿಯೇ ಕೃಷಿ ಸೇರಿದಂತೆ ಎಲ್ಲ ದೈನಂದಿನ ಚಟುವಟಿಕೆಗಳು ನಡೆಯುತ್ತಿದ್ದವು. ಇದರ ಪ್ರಕಾರ ಇಂದಿನ ನೀರಾವರಿ ಯೋಜನೆಗಳನ್ನು ನೋಡಿದಾಗ ಅಚ್ಚರಿ ಎನಿಸಬಹುದು.

ಒಂದು ಊರೆಂದರೆ ಅಲ್ಲೊಂದು ಕೆರೆ ಅಥವಾ ಬಾವಿ ಇರಲೇಬೇಕು ಎನ್ನುವ ನಾಣ್ಣುಡಿ ಇದೆ. ಗದ್ದೆಗಳಲ್ಲಿರುವ ಬಾವಿಗಳು ರೈತರಿಗೆ ಸಿರಿವಂತಿಕೆಯನ್ನು ತಂದುಕೊಟ್ಟರೆ, ನಗರಗಳಲ್ಲಿರುವ ಬಾವಿಗಳು ಜನರಿಗೆ ಜೀವ ಜಲ ಒದಗಿಸಿವೆ. ಬಾವಿಗಳಿಗೆ ಸಂಬಂಧಿಸಿದಂತೆ ಬಳ್ಳಾರಿ ನಗರದ ಪ್ರಾಚೀನ ಬಾವಿಗಳನ್ನು ಸಮಗ್ರವಾಗಿ ಅಧ್ಯಯನ ಮಾಡುವುದು ಇದರ ಉದ್ದೇಶವಾಗಿದೆ. ಬಳ್ಳಾರಿ ನಗರದಲ್ಲಿರುವ ಬಾವಿಗಳನ್ನು ಕುರಿತು ದಾಖಲಿಸುವ ಮೂಲಕ ಬಾವಿಗಳ ತಳಹದಿ, ಆಕಾರ, ವೈಶಿಷ್ಟ್ಯತೆಯನ್ನು ವಿಶ್ಲೇಷಿಸುವುದು ಈ ಲೇಖನದ ಉದ್ದೇಶವಾಗಿದೆ.

*Please cite this article as:* ಗಂಗೋತ್ರಿ. (2022). ಬಳ್ಳಾರಿ ನಗರದ ಪ್ರಾಚೀನ ಬಾವಿಗಳು: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(1), 29–35.

**ಬಳ್ಳಾರಿ ಸ್ಥಳನಾಮ**

ಬಳ್ಳಾರಿ ಎಂಬ ಹೆಸರು ಈ ನಗರಕ್ಕೆ ಹೇಗೆ ಬಂತೆಂಬುದಕ್ಕೆ ಹಲವು ದಂತಕಥೆಗಳು ಪ್ರಚಲಿತದಲ್ಲಿವೆ. ಅನೇಕ ವಿದ್ವಾಂಸರ ಪ್ರಕಾರ ಬಳ್ಳಾರಿ ತಾಲೂಕಿನ ಕೋಳೂರಿನಲ್ಲಿ 11–12ನೇ ಶತಮಾನದಲ್ಲಿ ಮಲ್ಲಯ್ಯ, ಮಲ್ಲೇಶನೆಂಬ ಶಿವಭಕ್ತನಿದ್ದ ಆತನು ಊರಿನಿಂದ ಊರಿಗೆ ನಂದಿಯ ಮೇಲೆ ಧಾನ್ಯಗಳನ್ನು ತೆಗೆದುಕೊಂಡು ಹೋಗಿ ವ್ಯಾಪಾರ ಮಾಡುತ್ತಿದ್ದ. ಆತನು ಪ್ರತಿನಿತ್ಯವೂ ಶಿವನನ್ನು ಪೂಜಿಸಿ, ನೈವೇದ್ಯ ಸಮರ್ಪಿಸಿದ ನಂತರವೇ ಅದನ್ನು ಸೇವಿಸುವುದು ಅವನ ನಿತ್ಯದ ವ್ರತವಾಗಿತ್ತು. ಒಂದು ದಿನ ವ್ಯಾಪಾರಕ್ಕಾಗಿ ಈಗಿನ ಬಳ್ಳಾರಿ ಕೋಟೆ ಪ್ರದೇಶಕ್ಕೆ ಬಂದಾಗ, ಆತನಿಗೆ ಕಣ್ಣು ನೋವಾದ್ದರಿಂದ ಶಿವಾಲಯವನ್ನು ಹುಡುಕಿಕೊಂಡು ಹೋಗಲಾಗಲಿಲ್ಲ. ಆದರೆ ಶಿವಲಿಂಗಕ್ಕೆ ನೈವೇದ್ಯ ಸಮರ್ಪಿಸದೆ ಪ್ರಸಾದವನ್ನು ಸ್ವೀಕರಿಸುವಂತಿರಲಿಲ್ಲ. ಅದನ್ನು ತಿಳಿದ ಆತನ ಭಾವ ಮೈದುನನು, ಒಂದು ಬಳ್ಳವನ್ನು (ಅಳತೆ ಸೇರು) ಬೋರಲು ಇಟ್ಟು, ಲಿಂಗವೆಂದು ತೋರಿಸಲು ಅದನ್ನೇ ಶಿವಲಿಂಗವೆಂದು ನಿಜಭಕ್ತಿ ಮತ್ತು ನಿಷ್ಠೆಯಿಂದ ಪೂಜಿಸಿದ. ಆತನ ಅನನ್ಯ ಭಕ್ತಿ ಮತ್ತು ನಿಷ್ಠೆಯಿಂದಾಗ ಆ ಬಳ್ಳವೇ ಲಿಂಗವಾಗಿತ್ತು. ಅದೇ ಇಂದಿನ ಬಳ್ಳಾರಿಯ ಮಲ್ಲೇಶ್ವರ ಲಿಂಗ ಭಕ್ತಮಲ್ಲಯ್ಯನಿಂದ ಲಿಂಗಕ್ಕೆ ಮಲ್ಲೇಶ್ವರ ಎಂದು ನಾಮಕರಣವಾಯಿತು. ಬಂಡೆಯ ಮೇಲೆ ಬೋರಲಿಟ್ಟ 'ಬಳ್ಳ'ದಿಂದಾಗಿ ಬಳ್ಳ+ಅರೆ=ಬಳ್ಳಾರೆ, ಬಳ್ಳಾರಿ [ಬಳ್ಳ–ಅಳತೆಯ ಸಾಧನ, ಅರೆ–ಬಂಡೆ] ಎಂದು ಅಂದಿನಿಂದ ಹೆಸರಾಯಿತು. ಸಾಮಾನ್ಯವಾಗಿ ಲಿಂಗಗಳ ಕೆಳಗಡೆ ಪಾಣಿ ಪೀಠವಿರುವಂತೆ, ಮಲ್ಲೇಶ್ವರ ಲಿಂಗದ ಕೆಳಗಡೆ ಪಾಣಿ ಪೀಠವಿಲ್ಲ. ಅಲ್ಲಿಯ ಪ್ರಾಕೃತಿಕವಾಗಿ ಇರುವ ಬಂಡೆಯ ಮೇಲೆಯೇ ಲಿಂಗವಿರುವುದನ್ನು ಈಗಲೂ ನೋಡಬಹುದು. ಮೇಲಿನ ಹೇಳಿಕೆಗೆ ಇದು ಒಂದು ನಿದರ್ಶನವಾಗಿದೆ. ಭೀಮಕವಿಯ ಬಸವ ಪುರಾಣದ 2ನೇ ಅಧ್ಯಾಯದ 8ನೇ ಸಂಧಿಯಲ್ಲಿ ಈ ಬಳ್ಳೇಶ ಮಲ್ಲಯ್ಯನ ಬಗ್ಗೆ ವಿವರಿಸಲಾಗಿದೆ.

ಪಂಪಾಬಿಕನಾಥನಾದ ಶ್ರೀ ವಿರುಪಾಕ್ಷೇಶ್ವರ ಕ್ಷೇತ್ರಕ್ಕೆ ಪೂರ್ವಭಾಗದಲ್ಲಿ ಮೂರು ಗಾವುದದ ಮೇಲೆ ಕೇವಲ ಅರಣ್ಯವಾಗಿದ್ದ ಸ್ಥಳದಲ್ಲಿ ಕೆಲವು ಪರ್ವತಗಳುಂಟು. ಈ ಪ್ರದೇಶವು ಸ್ವಾಯಂಬುವ ಮನುವಿನ ಆದಿ ಕೃತಯುಗ ಮೊದಲಾಗಿ ಈ ಕಡೆಗೆ ಸ್ವಾಯಂಬುವ, ಸ್ವಾರೋಚಿಷ, ಉತ್ತಮ, ತಾಮಸ ರೈವಶ., ಚಾಕ್ಷಷ, ವೈವಸ್ವತ ಮನುವಿನ ಇಪ್ಪೆತ್ತೆಂಟನೆಯ ಮಹಾಯುಗದಲ್ಲಿ ಕೃತಯುಗಪರ್ಯಂತವೂ ಮನುಷ್ಯ ಸಂಚಾರವಿಲ್ಲದೆ, ವನವಾಸಿಗಳಾಗಿ ಇರುವ ಋಷಿಗಳಿಗೆ ಆಸ್ಪದವಾಗಿತ್ತು. ತ್ರೇತಾಯುಗದಲ್ಲಿ ಈ ಪ್ರದೇಶವು ಅರಣ್ಯವಾಗಿತ್ತು. ದ್ವಾಪರದಲ್ಲಿ ಹಸ್ತಿನಾಪುರದ ರಾಜಧಾನಿಯ ರತ್ನಸಿಂಹಾಸನಾಧೀಶ್ವರರಾಗಿ ರಾಜ್ಯವಾಳಿದ ಚಂದ್ರವಂಶದ ಅರಸುಗಳು ಯಯಾತಿ ಸಂತತಿಯ ದುಷ್ಯಂತ ಮಹಾರಾಯ. ಈತನ ಮಗ ಭರತ. ಈ ಸಂತತಿಯವನಾದ ಶಂತನು ಚಕ್ರವರ್ತಿ, ಈತನ ಪೌತ್ರನಾದ ಪಾಂಡುರಾಯ. ಈತನ ಸಂಬಂಧಿಯಾದ ದುರ್ಯೋದನ ಮಹಾರಾಯ. ಆ ತರುವಾಯ ಪಾಂಡುರಾಯನ ಪುತ್ರನಾದ ಧರ್ಮರಾಯನು ಹಸ್ತಿನಾಪುರ ಸಿಂಹಾಸನಾಧೀಶ್ವರನಾಗಿ ರಾಜ್ಯ ಭಾರ ಮಾಡುವ ವೇಳೆಯಲ್ಲಿ ನರ್ಮದಾನದಿಗೆ ದಕ್ಷಿಣ ದೇಶದಲ್ಲಿ ತುಂಗಭದ್ರಾ ನದಿಗೆ ದಕ್ಷಿಣಕ್ಕೆ ಎರಡು ಹರಿದಾರಿಯಲ್ಲಿ ಇರುವ ಕುಂತಳನಗರವೆಂಬ ಪಟ್ಟಣದಲ್ಲಿ ಇದ್ದ ಚಂದ್ರಹಾಸರಾಯನು ಈ ಸೀಮೆಯ ಪ್ರಭುತ್ವ ಮಾಡುವ ವೇಳೆಯಲ್ಲಿ ಈ ಪ್ರದೇಶವು ಅರಣ್ಯವಾಗಿತ್ತು. ಆ ತರುವಾಯ ಈ ಸ್ಥಳದ ಗುಡ್ಡದ ಮೇಲೆ ಬಳಾಸುರನೆಂಬ ಒಬ್ಬ ರಾಕ್ಷಸನು ಆಶ್ರಯ ಮಾಡಿಕೊಂಡು ಜೀವಕೋಟಿಗಳಿಗೆ ಬಹು ಉಪದ್ರವ ಮಾಡುತ್ತ ಇರಲಾಗಿ, ಸ್ವರ್ಗಲೋಕದಿಂದ ದೇವಕನ್ಯಕೆಗಳು ಇಚ್ಛಾವಿಹಾರದಲ್ಲಿ ವಿಹರಿಸುತ್ತ ಇರುವಾಗ ಈ ಪರ್ವತದ ಮೇಲೆ ಖೇಚರ ಮಾರ್ಗದಲ್ಲಿ ಹೋಗುತ್ತಿರಲಾಗಿ ಈ ಪರ್ವತದಲ್ಲಿ ವಾಸಮಾಡಿಕೊಂಡಿರುವ ಬಳಾಸುರನೆಂಬ ದೈತ್ಯನು ಆ ದೇವಕನ್ಯಕೆಗಳನ್ನು ಕಂಡು ಕಾಮಾತುರನಾಗಿ ಅವರಿಗೆ ಉಪದ್ರವ ಕೊಟ್ಟಿದ್ದರಿಂದ, ಆ ದೇವಕನ್ನಿಕೆಗಳು ದೇವಲೋಕಕ್ಕೆ ಹೋಗಿ ದೇವೇಂದ್ರನಿಗೆ ಮೊರೆಯಿಡಲಾಗಿ, ಇಂದ್ರದೇವರು ಬಳಾಸುರನನ್ನು ವಧೆಮಾಡುವ ನಿಮಿತ್ತ ಭೂಲೋಕಕ್ಕೆ ಬಂದು ಬಳಾಸುರನ ಸಂಗಡ ಘೋರಯುದ್ಧವನ್ನು ಮಾಡಿ ಅವನನ್ನು ವಜ್ರಾಯುಧದಿಂದ ಸಂಹಾರ ಮಾಡಿದ್ದರಿಂದ ಈ ಗುಡ್ಡಕ್ಕೆ ಬಳ್ಳಾರಿ(ಬಳಾರಿ)ಯೆಂಬ ನಾಮವು ಪ್ರಸಿದ್ಧಿ ಹೊಂದಿತು.

ಬಳ್ಳಾರಿ ಮತ್ತು ದುರುಗಮ್ಮ ಎರಡೂ ದೇವರ ಹೆಸರೇ ಆಗಿವೆ. ಕೂಡಲ ಸಂಗಮದಂತೆ ಬಳ್ಳಾರಿ ದುರ್ಗಮ್ಮ ಆಗಿದೆ. ಹೀಗಾಗಿ ಬಳ್ಳಾರಿಗೆ ಬಳ್ಳಾರಿ ದೇವತೆಯಿಂದಲೇ ಆ ಹೆಸರು ಪ್ರಾಪ್ತವಾಗಿದೆ. 'ಬಳ್ಳಾರಿ' ಎಂಬುದು 'ಭಟಾರಿ' ಶಬ್ದದಿಂದ ಬಂದಿದೆ. ಅಂದರೆ ದುಷ್ಟಶಕ್ತಿಯ ವೈರಿ ಎಂದರ್ಥ. 'ಬಳ' ಎಂಬ ರಾಕ್ಷಸನನ್ನು ಇಲ್ಲಿ ಕೊಂದದ್ದಕ್ಕೆ ಬಳ್ಳಾರಿ ಎಂಬ ಹೆಸರು ಬಂತೆಂಬ ಕಥೆಯೂ ಇದೆ. ಏನೇ ಆದರೂ 'ಬಳಾರಿ' ದೇವತೆಯಿಂದಲೇ 'ಬಳ್ಳಾರಿ' ಎಂಬ ಹೆಸರು ಬಂದಿರಬೇಕು. ಬಳ್ಳಾರಿ ದುರ್ಗಿಯ ಬಗ್ಗೆ ಪ್ರಾಚೀನ ಕಾವ್ಯಗಳಾದ ಚಂದ್ರರಾಜನ 'ಮದನ ತಿಲಕದಲ್ಲಿ (ಕ್ರಿ.ಶ.1040) 'ಬಳರಿಯ ನೋಂಪಿಗೆ', ಜನ್ನನ' ಯಶೋಧರ ಚರಿತೆಯಲ್ಲಿ (ಕ್ರಿ.ಶ.1230) ' ಬಳರಿಯ ಬನ', ಭೀಮಕವಿಯ 'ಬಸವಪುರಾಣದಲ್ಲಿ (ಕ್ರಿ.ಶ.1369) 'ದಿಟ್ಟೆಬಳಹರಿ ಮಾರಿ', ಬ್ರಹ್ಮಶಿವನ 'ಸಮಯ ಪರೀಕ್ಷೆ' (ಕ್ರಿ.ಶ.1100) 'ಬಳರಿ', ಷಡಕ್ಷರಿಯ 'ರಾಜಶೇಖರ ವಿಳಾಸದಲ್ಲಿ (ಕ್ರಿ.ಶ. 1650) 'ಮನ್ಮಥ ಬಳಾರಿ'ಗೆ , ಚರುರಾಸ್ಯ ನಿಘಂಟುವಿನಲ್ಲಿ (ಕ್ರಿ.ಶ.1450) 'ಬಳರಿ' ಉಲ್ಲೇಖಗಳಿವೆ. ಇವಲ್ಲದೆ ಇನ್ನೂ ಅನೇಕ ಕಾವ್ಯ ಮತ್ತು ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಈ ಎಲ್ಲಾ ಗ್ರಂಥಗಳಲ್ಲಿ ಉಲ್ಲೇಖಿತವಾದ ದುರ್ಗಿಯೇ ಈ ಬಳ್ಳಾರಿಯ ಸುಪ್ರಸಿದ್ಧ ದುರ್ಗಿಯೆಂದು ಊಹಿಸಬಹುದು.

ಮಾನವನ ಸಂಸ್ಕೃತಿ ಮತ್ತು ಚರಿತ್ರೆಯ ಬೆಳವಣಿಗೆಗೆ ಇಲ್ಲಿನ ಭೌಗೋಳಿಕ ಪರಿಸರ ಸಾಕಷ್ಟು ಸಹಾಯಕವಾಗಿದೆ. ನಿಸರ್ಗ ನಿರ್ಮಿತವಾದ ಬೆಟ್ಟ, ಗುಡ್ಡ, ಖನಿಜ, ಗವಿ, ಹಳ್ಳ, ನದಿ, ಕಾಡು,

ಪ್ರಾಣಿ ಸಂಕುಲ ಮತ್ತು ಫಲವತ್ತಾದ ಮಣ್ಣು ಮೊದಲಾದವುಗಳು ತನ್ನದೇ ಆದ ಮಹತ್ವ ಪಡೆದಿವೆ. ಬಳ್ಳಾರಿಯಲ್ಲಿನ ಪ್ರಾಕೃತಿಕ ಸಂಪನ್ಮೂಲಗಳಾದ ಖನಿಜ ನಿಕ್ಷೇಪ ಗಣಿಗಾರಿಕೆ ವಿಶ್ವಪ್ರಸಿದ್ಧಿಯನ್ನು ಪಡೆದುಕೊಂಡಿದೆ.

**ಬಾವಿಗಳ ಪ್ರಾಚೀನತೆ**

ಬಾವಿಗಳಲ್ಲಿ ಎರಡು ವಿಧದ ಬಾವಿಗಳನ್ನು ಕಾಣಬಹುದು. ಮೊದಲನೆಯ ವರ್ಗವೆಂದರೆ ಖಾಯಂ ಆಗಿ ನೀರು ದೊರೆಯುವ ಸರ್ವಋತು ಬಾವಿಗಳು. ಎರಡನೆಯ ವರ್ಗದ ಬಾವಿಗಳೆಂದರೆ ನದಿ ಹಾಗೂ ಹಳ್ಳಗಳಲ್ಲಿ ತಾತ್ಕಾಲಿಕವಾಗಿ ತೋಡಲಾದ ಬಾವಿಗಳು. ಇವುಗಳನ್ನು 'ಒರತೆಗಳು' ಎಂದು ಕರೆಯುತ್ತಾರೆ. ಯಾವುದೇ ಬಗೆಯ ಬಾವಿಗಳೇ ಇದ್ದಲ್ಲಿ ಅವು ಅಧಿಕ ಪ್ರದೇಶಗಳಿಗೆ ನೀರು ನೀಡುವ ಸಾಮರ್ಥ್ಯ ಹೊಂದಿರುತ್ತಿರಲಿಲ್ಲ. ಹೀಗಾಗಿ ಈ ದಿಶೆಯಲ್ಲಿ ನಮಗೆ ನದಿ ನೀರಾವರಿಯು ದೊರಕಿದಂತೆ ವಿಫುಲ ಮಾಹಿತಿ ದೊರೆಯುವುದಿಲ್ಲ.

ನೀರಾವರಿ ಕಾರ್ಯಕ್ರಮಗಳಲ್ಲಿ ಸಾಮಾಜಿಕ ಮತ್ತು ಧಾರ್ಮಿಕವಾಗಿ ಬಾವಿಗಳಿಗೆ ತನ್ನದೇ ಆದ ಸ್ಥಾನ ಇದೆ ಎಂಬುದನ್ನು ಮರೆಯಲಾಗದು. ಏಕೆಂದರೆ ವಿಷ್ಣುಧರ್ಮೋತ್ತರದಲ್ಲಿ ಸಾರ್ವಜನಿಕರ ಹಿತಕ್ಕಾಗಿ ಬಾವಿ ಅಗೆಸಿದವನು ವರುಣ ಲೋಕದಲ್ಲಿ ಸ್ಥಾನ ಪಡೆಯುತ್ತಾನೆ ಎಂದು ತಿಳಿಸಿದೆ. ಸಾಹಿತ್ಯ ಕೃತಿಗಳಾದ ಬಾಣನ ಬರಹ ಹಾಗೂ ಮಿತ್ರ ಚಕ್ರಪಾಣಿಯ ವಿಶ್ವವಲ್ಲಭ ಮುಂತಾದ ಪುರಾತನ ಗ್ರಂಥಗಳಲ್ಲಿ ಬಾವಿಗಳ ಬಗೆಗೆ ಪವಿತ್ರ ಮತ್ತು ಪುಣ್ಯ ಭಾವನೆಗಳನ್ನು ವ್ಯಕ್ತಪಡಿಸಿದೆ. ವಿವಿಧ ಹೆಸರಿನ ಬಾವಿಗಳನ್ನು ತಿಳಿಸಲಾಗಿದ್ದು, ಅವು ಹೀಗಿದೆ. ಶ್ರೀಮುಖ, ವಿಜಯ, ಪ್ರಾಂತ, ಧುಂದುಬಿ, ಮನೋಹರ, ಚೂಡಾಮಣಿ, ಭದ್ರ, ಜಯ, ಮಂದ ಮತ್ತು ಶಂಕರ.

ಬಾವಿಗಳು ನೀರಾವರಿ ಉಪಯೋಗಕ್ಕದೆ, ಮಾನವರ ಸಾಮಾಜಿಕ ಮತ್ತು ಧಾರ್ಮಿಕ ಜೀವನದ ಅಂಗಗಳಾಗಿದ್ದುವು. ಅನೇಕ ವೇಳೆ ಅವು ದೇವಾಲಯದ ಹಾಗೂ ದೇವರುಗಳ ವಿವಿಧ ಕಾರ್ಯಗಳಿಗೆಂದೇ ನಿರ್ಮಿಸಲಾಗಿದ್ದವು. ಅನೇಕ ಶುಭ ಕಾರ್ಯಗಳಿಗೆಂದೇ ಜನರು ಇಂದಿಗೂ ಬಾವಿಗಳನ್ನು ಅವಲಂಬಿಸಿದ್ದಾರೆ. ಬಾವಿಯಲ್ಲಿ ಗಂಗಮ್ಮ ಇರುತ್ತಾಳೆ ಎಂದೇ ಅನೇಕರ ಭಾವನೆಯಾಗಿದೆ. ಸಾಮಾನ್ಯವಾಗಿ ನೀರಾವರಿಗೆಂದೇ ನಿರ್ಮಿಸಿದ ಬಾವಿಗಳು ಊರಿನಿಂದ ಹೊರಗಡೆಯ ಪ್ರದೇಶಗಳಾದ ಹೊಲ, ತೋಟ, ಗದ್ದೆಗಳಲ್ಲಿರುತ್ತಿದ್ದವು. ಆದರೆ ಜನರಿಗೆ ಕುಡಿಯಲು ಮತ್ತು ದೇವಾಲಯದಲ್ಲಿ ಧಾರ್ಮಿಕ ಕಾರ್ಯಗಳಿಗೆಂದೇ ತೆಗೆಸಿದ ಬಾವಿಗಳು ಜನವಸತಿ ಪ್ರದೇಶಗಳಲ್ಲಿರುತ್ತಿದ್ದವು. ಅವುಗಳ ರಚನೆ ಸಂಕಿರಣತೆ ಒಡಗೂಡಿರುತ್ತಿತ್ತು. ಏಕೆಂದರೆ ಕೆಲವು ಬಾವಿಗಳು ದೇವತಾ ಮೂರ್ತಿಗಳಿಂದಲೂ, ಮಂಪಟಗಳಿಂದಲೂ ನಾಲ್ಕು ಬದಿಯಲ್ಲಿ ಮೆಟ್ಟಿಲುಗಳಿಂದಲೂ ನೀರುಣಿಸುತ್ತಿದ್ದುದುಂಟು.

**ಬಳ್ಳಾರಿ ನಗರದ ಪ್ರಮುಖ ಬಾವಿಗಳು**

ಜೀವನದ ಮೂಲ ಅಗತ್ಯಗಳಲ್ಲಿ ನೀರು ಒಂದು ಪ್ರಮುಖವಾದುದು. ಈ ಅಗತ್ಯವನ್ನು ಪೂರೈಸಲು ಬಾವಿಗಳನ್ನು ತೋಡಿಸುತ್ತಿದ್ದರು. ಅವುಗಳ ರಕ್ಷಣೆಗಾಗಿ ದತ್ತಿದಾನ ನೀಡಿರುವುದು ಕಂಡು ಬರುತ್ತದೆ. ಇದಕ್ಕೆ ಹಂಡೆ ಪಾಳೆಯಗಾರರು ಹೊರತಾಗಿಲ್ಲ. ಅವರು ಸಹ ಅನೇಕ ಬಾವಿಗಳನ್ನು ಕಟ್ಟಿಸಿರುವರು. ಅಂತಹವುಗಳಲ್ಲಿ ಕೆಲವು ಕಂಡು ಬರುತ್ತದೆ. ಕೆಲವು ಬಾವಿಗಳನ್ನು ಮುಚ್ಚಿ ನೆಲಸಮ ಮಾಡಲಾಗಿದೆ. ಉಳಿದವುಗಳಲ್ಲಿ ಬಳ್ಳಾರಿಯ ಅವ್ವಮ್ಮ ಬಾವಿ, ಕೊರ್ಲಗುಂದಿಯ ಹಾಲಬಸವೇಶ್ವರ ಬಾವಿ, ನೀಲಮ್ಮನ ಬಾವಿ, ಅಂದರಾಳು, ಬೈಲೂರು ಗ್ರಾಮದ ಬಾವಿಗಳ ಜೊತೆಗೆ ವಾಸ್ತು ಕಲಾ ಮತ್ತು ರಚನೆಯ ದೃಷ್ಟಿಯಿಂದ ಅವ್ವಮ್ಮ ಬಾವಿ, ಸೈನಿಕ ಬಾವಿ, ಅಂದ್ರಾಳು, ಕೊರ್ಲಗುಂದ, ಬಾವಿಗಳು ಪ್ರಮುಖವಾಗಿವೆ.

ಬಾವಿಗಳನ್ನು ಕಟ್ಟಲು ಸ್ಥಳೀಯವಾಗಿ ದೊರೆಯುವ ಕಲ್ಲುಗಳನ್ನು ಬಳಸಲಾಗಿದೆ. ಬಾವಿಗಳನ್ನು ಚೌಕಾಕಾರವಾಗಿ ಕಟ್ಟಿದ್ದು ನಾಲ್ಕು ಗೋಡೆಗಳಿವೆ. ಒಂದು ಬದಿಯಲ್ಲಿ ಬಾವಿಗೆ ಇಳಿಯಲು ಪಾವಟಿಗೆಗಳನ್ನು, ಅವುಗಳ ಮಗ್ಗಲಿಗೆ ಕಮಾನು ಕೋಣೆಗಳನ್ನು ಸಹ ಮಾಡಲಾಗಿದೆ. ಭೂಮಿಗೆ ನೀರನ್ನು ಎತ್ತಿಹಾಕಲು ಏತಕ್ಕೆ ಸಹಾಯಕವಾಗಲು ಏತದ ಬಾವಿಯನ್ನು, ಏತದ ನೀರು ಬೀಳು ಬಚ್ಚಲುಗಳನ್ನು ಕಟ್ಟಲಾಗಿದೆ. ಬಾವಿಗಳ ಗೋಡೆಗಳ ಮೇಲೆ ಮತ್ಸ್ಯ, ಆಮೆ, ಹಾವು, ಆನೆ, ಸಿಂಹ, ಸ್ತ್ರೀ–ಪುರುಷರ ಮಿಥುನ ಶಿಲ್ಪಗಳ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಬಾವಿಯ ಸುತ್ತಲೂ ಮೇಲೆ ಕುಳಿತು ಕೊಳ್ಳಲು ಕಟ್ಟೆಯನ್ನು ಮಾಡಲಾಗಿದೆ.

ಬಳ್ಳಾರಿ ಪಟ್ಟಣಕ್ಕೆ ಪೂರ್ವ, ಪಶ್ಚಿಮ, ಉತ್ತರ ದಕ್ಷಿಣ ದಿಕ್ಕುಗಳಲ್ಲಿ ರಸ್ತೆಗಳಿವೆ. ಈ ರಸ್ತೆಗಳಲ್ಲಿ ಒಂದೊಂದರಂತೆ 4 ಬಾವಿಗಳು ಇವೆ. ಕೋಟೆಯ ಮುಂಭಾಗದಲ್ಲಿ ಮೇದಾರ ಓಣಿಯಲ್ಲಿ, ತೇರು ಬೀದಿಯಲ್ಲಿ, ಅಲ್ಲಲ್ಲಿ ರಸ್ತೆಯುದ್ದಕ್ಕೂ ಬಾವಿಗಳಿವೆ. ಇವುಗಳನ್ನು ರಸ್ತೆಯಲ್ಲಿ ಪ್ರಯಾಣಿಕರು ಪ್ರಯಾಣ ಕಾಲದಲ್ಲಿ ಬಾಯಾರಿಕೆ ಆದಾಗ ನೀರು ಕುಡಿದು ವಿಶ್ರಾಂತಿ ಪಡೆಯಲು ಬಾವಿಗಳನ್ನು ತೋಡಿಸುತ್ತಿದ್ದರು. ಬಳ್ಳಾರಿಯಿಂದ ಸಿರುಗುಪ್ಪಕ್ಕೆ ಹೋಗುವ ದಾರಿಯಲ್ಲಿ ಅವ್ವಮ್ಮ ಬಾವಿದೆ. ಈ ಬಾವಿಯನ್ನು ರಾಮಪ್ಪನಾಯಕ ಎಂಬ ಪಾಳೆಯಗಾರನ ಹೆಂಡತಿ ಅವ್ವಮ್ಮ ಎಂಬ ರಾಣಿಯು ಕಟ್ಟಿಸಿರುವಳೆಂದು ತಿಳಿದು ಬರುತ್ತದೆ. ಅಲ್ಲದೆ ಸ್ಥಳೀಯವಾಗಿ ಆ ಬಾವಿಯ ಸುತ್ತಲೂ ಜನವಸತಿ ಆಗಿರುವುದರಿಂದ ಈ ಪ್ರದೇಶವನ್ನು ಅವ್ವಮ್ಮ ಬಾವಿ ಎಂದು ಕರೆಯಲಾಗುತ್ತದೆ. ಹಂಡೆ ಬಾಲದ ಹನುಮಪ್ಪ ನಾಯಕನಿಗೆ ಆರು ಜನ ಸಹೋದರಿಯರಿದ್ದು, ಅವರ ಹೆಸರಿನಲ್ಲಿ ಆರು ಬಾವಿಗಳನ್ನು ಬಳ್ಳಾರಿಯಲ್ಲಿ ನಿರ್ಮಿಸಿರುವುದಾಗಿ ಬಳ್ಳಾರಿ[1] ಗೆಜಿಟಿಯರ್‌ನಿಂದ ತಿಳಿದುಕೊಳ್ಳಬಹುದಾಗಿದೆ.

**ಅವ್ವಮ್ಮ ಬಾವಿ**

ಈ ಬಾವಿಯ ಕಟ್ಟಡವು ಅತ್ಯಂತ ಸುಸಜ್ಜಿತವಾಗಿದೆ. ಸುತ್ತಲೂ ಕಲ್ಲಿನಿಂದ ಕಟ್ಟಲ್ಪಟ್ಟಿದೆ. ನೀರು ಈಗಲೂ ಸ್ವಚ್ಛ ಹಾಗೂ

ಕುಡಿಯಲು ಯೋಗ್ಯವಾಗಿವೆ. ಜನರು ಈ ನೀರನ್ನು ಇಂದಿಗೂ ಬಳಕೆ ಮಾಡುತ್ತಾರೆ. ವಾಸ್ತು ಪ್ರಕಾರ ಈ ಬಾವಿಯು ನಿರ್ಮಾಣವಾಗಿದೆ. ಬಾವಿಯು ಚೌಕಾಕಾರವಾಗಿದ್ದು, ಪೂರ್ವದಿಂದ ಪಶ್ಚಿಮಾಭಿಮುಖವಾಗಿ ಬಾವಿಯೊಳಗೆ ಇಳಿಯಲು ಪಾವಟಿಗೆಗಳನ್ನು ನಿರ್ಮಾಣ ಮಾಡಲಾಗಿದೆ. ಕೆಲ ಪಾವಟಿಗೆಗಳ ನಂತರ ಮೇಲ್ಹಾವಣಿ ಹಾಕಿದ ಅಂದರೆ ಬಂಡೆಗಳನ್ನು ಮೇಲ್ಹಾವಣಿಗೆ ಹಾಸಲಾಗಿದೆ. ಅಲ್ಲಿಂದ ಉತ್ತರಾಭಿಮುಖವಾಗಿ ಬಾವಿಯೊಳಗೆ ಇಳಿಯಲು ಪಾವಟಿಗೆಗಳಿವೆ. ಬಾವಿಯ ಅರ್ಧಕ್ಕೆ ಉತ್ತರದಲ್ಲಿ ಕಮಾನುಗಳಿವೆ. ಅಲ್ಲಿಂದ ಬಾವಿಯನ್ನು ಸಂಪೂರ್ಣವಾಗಿ ವೀಕ್ಷಿಸಬಹುದಾಗಿದೆ. ಬಾವಿಯ ಆಳದ ಕಟ್ಟಡದಲ್ಲಿ ಮತ್ಸ್ಯ, ಕೂರ್ಮ ಮತ್ತು ನಾಗದೇವತೆಯ ಉಬ್ಬು ಶಿಲ್ಪಗಳಿವೆ. ಬಾವಿಯ ಮೇಲ್ಭಾಗದಲ್ಲಿ ಏತನೀರಾವರಿ ಮಾಡಲು ಕಲ್ಲಿನ ಬಂಡೆಗಳನ್ನು ನಿರ್ಮಿಸಲಾಗಿದೆ. ಈ ಬಾವಿಯನ್ನು ಪ್ರಯಾಣಿಕರ ಅನುಕೂಲಕ್ಕಾಗಿ ಅವ್ವಮ್ಮ ಎಂಬ ರಾಣಿ ನಿರ್ಮಿಸಿದ್ದಳು ಎಂದು ತಿಳಿದು ಬಂದಿದೆ.

**ಸೋದರಿ ಬಾವಿ**

ಬಳ್ಳಾರಿಯ ನಗರದ ಮೇದಾರ ಓಣಿಯಲ್ಲಿರುವ ಬಾವಿಯು ಅವ್ವಮ್ಮನ ಬಾವಿಯ ಶೈಲಿಯನ್ನು ಯಥಾವತ್ತಾಗಿ ಹೋಲುತ್ತದೆ. ಪ್ರಸ್ತುತ ಈ ಬಾವಿಯ ಸುತ್ತಲೂ ಮನೆಗಳನ್ನು ನಿರ್ಮಿಸಿದ್ದು, ಈ ಬಾವಿಯಲ್ಲಿನ ನೀರು ಅತ್ಯಂತ ಮಲೀನಗೊಂಡಿದೆ. ಇಲ್ಲಿಯೂ ಹಿಂದೂ–ಮುಸ್ಲಿಮರು ವಾಸ್ತು ಶೈಲಿಯನ್ನು ಕಾಣಬಹುದು. ಇಲ್ಲಿ ನಂದಿ, ಲಿಂಗ, ನರ್ತಕಿ ಹಾಗೂ ಕಮಲದ ವಿನ್ಯಾಸಗಳನ್ನು ಅಲ್ಲಲ್ಲಿ ಬಾವಿಯ ಕಲ್ಲಿನ ಗೋಡೆಯಲ್ಲಿ ಕೆತ್ತಲಾಗಿದೆ. ನೀರೆತ್ತಲು ಇಲ್ಲಿಯೂ ಎರಡು ಏತದ ಕಮಾನುಗಳಿವೆ. ಈ ಬಾವಿಯ ನೀರು ಕುಡಿಯಲು ಮತ್ತು ಕೃಷಿಗಾಗಿ ಬಳಸುತ್ತಿದ್ದುದ್ದಾಗಿ ಸ್ಥಳೀಯರು ಸ್ಪಷ್ಟಪಡಿಸಿದ್ದಾರೆ. ಪ್ರಸ್ತುತ ಈ ಬಾವಿಯ ಹೆಸರನ್ನು ಗುರುತಿಸಲು ಸಾಧ್ಯವಾಗಿಲ್ಲ. ಬಾಲದ ಹನುಮಪ್ಪ ನಾಯಕನ ಅಕ್ಕ ತಂಗಿಯರ ಬಾವಿ ಎಂದು ಸ್ಥಳೀಯರು ಹೇಳುತ್ತಾರೆ.

**ಸೋದರಿಯರ ಬಾವಿ**

ಬಳ್ಳಾರಿಯಿಂದ 6 ಕಿ.ಮೀ. ದೂರದ ಸಿರುಗುಪ್ಪ ರಸ್ತೆಯ ವಕ್ರಾಣಿ ಕ್ಯಾಂಪನ್ ಹತ್ತಿರ ಗಾಣಿಗನ ಹಳ್ಳದ ಪಕ್ಕದ ಹುಣಿಸೆ ಗಿಡದ ಬುಡದಲ್ಲಿ ಈ ಬಾವಿ ಇದೆ. ಮೇಲಿನ ಎರಡು ಬಾವಿಗಳ ವಿನ್ಯಾಸ ಹಾಗೂ ಶೈಲಿಯನ್ನು ಯಥವತ್ತಾಗಿ ಇಲ್ಲಿಯೂ ಅಳವಡಿಸಲಾಗಿದೆ. ಬಾಲದ ಹನುಮಪ್ಪ ನಾಯಕನು ಮೇಲಿನ ಎರಡು ಬಾವಿಗಳನ್ನು ಕಟ್ಟಿಸಿದಂತೆ. ಈ ಬಾವಿಯನ್ನು ತನ್ನ ಸಹೋದರಿಯ ನೆನಪಿಗಾಗಿ ಕಟ್ಟಿಸಿರುವುದಾಗಿ ಸ್ಥಳೀಯರಿಂದ ತಿಳಿದು ಬರುತ್ತದೆ. ಮೇಲಿನ ಎರಡು ಬಾವಿಗಳಂತೆ ಇದು ಚಿಕ್ಕದಾಗಿದ್ದು, ಬಾವಿಯ ವಿನ್ಯಾಸ ಮೇಲಿನ ಎರಡು ಪಡಿಯಚ್ಚು ಇದ್ದಂತಿದೆ. ಆದರೆ ಇದರ ಪ್ರವೇಶ ದ್ವಾರ ಪಶ್ಚಿಮಕ್ಕಿದೆ. ಇಲ್ಲಿ ಮಧ್ಯದ ಒಂದು ಕಮಾನಿನಲ್ಲಿ ಎರಡು ನಂದಿಯ ಮಧ್ಯ ಈಶ್ವರ ಲಿಂಗವಿದ್ದು, ಬದಿಗಳಲ್ಲಿ ಕಮಲ, ಮುಂಗುಸಿ, ನವಿಲು, ಆನೆ ಮುಂತಾದ ಶಿಲ್ಪಗಳನ್ನು ಗೋಡೆಯ ಮೇಲೆ ಕೆತ್ತಲಾಗಿದೆ. ಪ್ರಸ್ತುತ ಈ ಬಾವಿಯು ಬಿದ್ದು ಹಾಳಾಗಿದೆ. ಬಾವಿಯಲ್ಲಿ ನೀರು ತುಂಬಿದ್ದರೂ ಆ ನೀರನ್ನು ಯಾರೂ ಬಳಸಿಕೊಳ್ಳುವಂತಿಲ್ಲ. ಸಂಪೂರ್ಣ ಕೃಷಿಗಾಗಿಯೇ ಈ ಬಾವಿಯ ನೀರನ್ನು ಬಳಸಿಕೊಳ್ಳುತ್ತಿರುವಂತಿದೆ. ಹೊಲದ ಮಾಲೀಕರನ್ನು ಕೇಳಿದಾಗ ಈ ಬಾವಿಯ ಏತ ನೀರಾವರಿಯಿಂದ ಬಹಳ ಹಿಂದಿನಿಂದಲೂ ತೋಟವನ್ನು ಮಾಡಲಾಗುತ್ತಿತ್ತು ಎಂಬ ಸ್ಥಳೀಯರ ಮಾಹಿತಿ ಇದೆ.

**ನಾಗಲಕೆರೆ ದೊಡ್ಡ ಬಾವಿ**

ಬಲದ ಹನುಮಪ್ಪ ನಾಯಕನ ಅಕ್ಕ– ತಂಗಿಯರ ದೊಡ್ಡ ಬಾವಿ ನಾಗಲಕೆರೆ ಬಳ್ಳಾರಿಯ ನಾಗಲಕೆರೆಯ ಹತ್ತಿರವಿರುವ ಈ ಬಾವಿಯೂ ಮೇಲಿನ ಬಾವಿಗಳ ವಾಸ್ತು ವಿನ್ಯಾಸ, ಶೈಲಿಯನ್ನು ಹೊಂದಿದೆ. ಈ ಬಾವಿಯ ನೀರನ್ನು ಸಹ ಕೃಷಿಗೆ ಏತ ನೀರಾವರಿಯ ಮೂಲಕ ಉಪಯೋಗಿಸುತ್ತಿದ್ದುದು ಮತ್ತು ಕುಡಿಯಲು ಬಳಸುತ್ತಿದ್ದುದ್ದಾಗಿ ತಿಳಿದು ಬರುತ್ತದೆ. ಈಗ ಬಳಕೆಯಿಲ್ಲದಿರುವುದರಿಂದ ಈ ಬಾವಿಯ ನೀರು ಮಲೀನವಾಗಿದೆ. ಪ್ರಸ್ತುತ ದೊಡ್ಡದಾದ ಈ ಬಾವಿಗೆ ಸಹಜವಾಗಿ ನಾಗಲಕೆರೆ ದೊಡ್ಡ ಬಾವಿ ಎಂದು ಕರೆಯುತ್ತಾರೆ.

**ಅಕ್ಕ ತಂಗಿಯರ ಬಾವಿ**

ಬಾಲದ ಹನುಮಪ್ಪ ನಾಯಕ ಪಾಳೆಯಗಾರನಿಂದ ನಿರ್ಮಿಸಿದ ಈ ಬಾವಿ ಬಳ್ಳಾರಿ ಪಾರ್ವತಿ ನಗರದ ಒಂದನೆಯ ಕ್ರಾಸ್‌ನಲ್ಲಿದ್ದು, ಇಲ್ಲಿ ಅದನ್ನು ಸಂಪೂರ್ಣವಾಗಿ ಕಲ್ಲುಮಣ್ಣಿನಿಂದ ಮುಚ್ಚಿ ಹಾಕಿದ್ದಾರೆ. ಇದರ ಮೇಲೆ ಶಾಂತಿ ಶಿಶುವಿಹಾರ ಶಾಲೆ ಪ್ರಾರಂಭಿಸಿದ್ದಾರೆ. ಮುಂದುಗಡೆ ಗಾರ್ಡನ್ ಮಾಡಿದ್ದಾರೆ. ಬಾವಿಯ ಯಾವ ಅವಶೇಷಗಳು ಇಲ್ಲಿ ಉಳಿದಿಲ್ಲ. ಸ್ಥಳೀಯರು ಈ ಬಾವಿ ಮತ್ತು ಅವ್ವಮ್ಮನ ಬಾವಿ ಒಂದೇ ರೀತಿ ಇದ್ದುದಾಗಿ ಸ್ಮರಿಸಿಕೊಳ್ಳುತ್ತಾರೆ. ಈಗ ಇಲ್ಲಿ ವನದಲ್ಲಿ ಹನುಮಪ್ಪನಾಯಕ ಕುಳಿತುಕೊಳ್ಳುತ್ತಿದ್ದ ಶಿಲೆಯ ಆಸನವೊಂದು ಕುರುಹು ಆಗಿ ಉಳಿದುಕೊಂಡಿದೆ.

**ವಡ್ಡರ ಬಂಡೆಯ ದೊಡ್ಡಬಾವಿ**

ಬಾಲದ ಹನುಮಪ್ಪ ನಾಯಕನು ತನ್ನ ಅಕ್ಕ–ತಂಗಿಯರ ನೆನಪಿಗಾಗಿ ಕಟ್ಟಿಸಿದ ಐದು ದೊಡ್ಡ ಬಾವಿಗಳಲ್ಲಿ ಒಂದಾಗಿದೆ. ಮೇಲಿನ ಐದು ಬಾವಿಗಳಲ್ಲಿಯ ಶೈಲಿ ಹಾಗೂ ಶಿಲಾನ್ಯಾಸಗಳನ್ನು ಈ ಬಾವಿಯಲ್ಲಿಯೂ ನಾವು ಕಾಣಬಹುದು. ಅಲ್ಲದೆ ವಡ್ಡರ ಬಂಡೆಯ ಹತ್ತಿರವಿರುವುದರಿಂದ ಇದನ್ನು ವಡ್ಡರ ಬಂಡೆಯ ದೊಡ್ಡ ಬಾವಿ ಎಂದು ಪ್ರಸಿದ್ಧಿಯಾಗಿದೆ. ಈ ಬಾವಿಯ ಕೃಷಿಗಾಗಿ ಏತ ನೀರಾವರಿ[2] ಕುಡಿಯಲು ಮತ್ತು ದೈನಂದಿನ ಚಟುವಟಿಕೆಗಳ ಬಳಕೆಗಾಗಿ ಉಪಯೋಗವಾಗುತ್ತಿದ್ದುದಾಗಿ ಸ್ಥಳೀಯರಿಂದ ತಿಳಿದು ಬರುತ್ತದೆ. ಒಟ್ಟಾರೆ ಬಾಲದ ಹನುಮಪ್ಪ ನಾಯಕನು ಕಟ್ಟಿಸಿದ ಆರು ಬಾವಿಗಳಲ್ಲಿ ಆರು ಜನ ಸಹೋದರಿಯರ ಹೆಸರುಗಳಲ್ಲಿ ಅವ್ವಮ್ಮನ ಹೆಸರಿನ ಒಂದು ಬಾವಿಯನ್ನು ಗುರುತಿಸಲು

ಸಾಧ್ಯವಾಗಿದೆ. ಇನ್ನುಳಿದ ಐದು ಜನ ಸಹೋದರಿಯರ ಹೆಸರನ್ನು ಕುರಿತು ಅಧ್ಯಯನ ಮಾಡಲಾಗುತ್ತಿದೆ.

**ಕೆಂಚನಗುಡ್ಡದ ಗಂಗಾಧರೇಶ್ವರ ದೇವಸ್ಥಾನದ ಬಾವಿ**

ಹಂಡೆ ಪಾಳೆಯಗಾರರು ಅಸಂಖ್ಯಾತ ಮಠಗಳನ್ನು ಕರ್ನಾಟಕ, ಆಂಧ್ರಪ್ರದೇಶದಾದ್ಯಂತ ನಿರ್ಮಿಸಿದ್ದಾರೆ. ಹಾಗೆಯೇ ಆಯಾ ಮಠಗಳಲ್ಲಿ ಬಾವಿಗಳನ್ನು ನಿರ್ಮಿಸಿರುವುದು ಕಂಡು ಬರುತ್ತದೆ. ನೀರನ್ನು ಕುಡಿಯುವುದಕ್ಕಾಗಿ ಮತ್ತು ತೋಟಕ್ಕಾಗಿ, ವಿವಿಧ ಉದ್ದೇಶಗಳಿಗಾಗಿ ಬಳಕೆಯಾಗುತ್ತಲಿರುವುದು ಕಂಡು ಬಂದ ವಿಷಯವಾಗಿದೆ. ತೆಕ್ಕಲಕೋಟೆಯ ಹತ್ತಿರವಿರುವ ಕಾಂಚನಗಡವು ಬಳ್ಳಾರಿ ಪಾಳೆಯಗಾರರ ಬಾಲದ ಹನುಮಪ್ಪ ನಾಯಕನಿಗೆ ಬಿಜಾಪೂರದ ಸುಲ್ತಾನನಿಂದ ಕ್ರಿ.ಶ. 1588ರಲ್ಲಿ ಕೊಡುಗೆಯಾಗಿ ಈ ಪರಗಣೆಯು ಬಂದಿತ್ತು. ಆಗ ಹನುಮಪ್ಪ ನಾಯಕನು ಬಿಜಾಪುರ ಸೀಮೆಯ ತನ್ನ ಸಂಬಂಧಿಕರಾದ ಬಸವನಗೌಡ ಎಂಬುವವನನ್ನು ಸಿರುಗುಪ್ಪ, ಕಾಂಚನಗಡ, ಕುರುಗೋಡು ಪ್ರದೇಶಕ್ಕೆ ಗ್ರಾಮಗೌಡನನ್ನಾಗಿ ನೇಮಿಸಿ, ಮುಂದೆ ಬಳ್ಳಾರಿಗೆ ಬರುತ್ತಾನೆ.

ನಂತರದಲ್ಲಿ ಈ ವಂಶದ ಬಳ್ಳಾರಿ ಪಾಳೆಯಗಾರರ ದೇವಪ್ಪನಾಯಕರ (ಕ್ರಿ.ಶ. 1693–1708)_ ಅಧೀನದಲ್ಲಿದ್ದ ಕೆಂಚನಗುಡ್ಡವನ್ನು ಸಿರುಗುಪ್ಪದ ನಾಡಗೌಡಿಕೆಯನ್ನು ತನ್ನ ಸಂಬಂಧಿಕರಾದ ಮುದುಕನಗೌಡ ಎಂಬುವವನಿಗೆ ಕ್ರಿ.ಶ.1704ರಲ್ಲಿ ವಹಿಸಿಕೊಡುತ್ತಾನೆ. ಮುದುಕನಗೌಡನು ತನ್ನ ಎರಡನೆಯ ಮಗನಾದ ಕೆಂಚನಗೌಡನನ್ನು ಅಣ್ಣನಿಗೆ ದತ್ತುಕೊಡುತ್ತಾನೆ. ಕ್ರಿ.ಶ. 1707ರಲ್ಲಿ ಕಾಂಚನಗುಡ್ಡದ ಮೇಲೆ ಕೋಟೆ ಕಟ್ಟಿಸಿ ಕೆಳಗೆ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನ ಕಟ್ಟಿಸಿ ಅದರ ಮುಂದೆ ಬಾವಿಯೊಂದನ್ನು ನಿರ್ಮಿಸಿದನು. ಈ ಬಾವಿಯ ನೀರು ದೇವಸ್ಥಾನದ ಪೂಜಾ ಕಾರ್ಯಗಳಿಗೆ ಹಾಗೂ ಅಲ್ಲಿ ಜರುಗುವ ಉತ್ಸವ, ಮದುವೆ ಮುಂತಾದ ಧಾರ್ಮಿಕ ಕಾರ್ಯಗಳಿಗೆ ನೀರಿನ ತೊಂದರೆಯಾಗದಂತೆ ಈ ಬಾವಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಈತನ ಹೆಸರಿನಿಂದಲೇ ಈ ಗುಡ್ಡಕ್ಕೆ ಕಾಂಚನಗುಡ್ಡ ಎಂಬ ಹೆಸರು ಬಂದಿರುವುದು ತಿಳಿದುಬರುತ್ತದೆ.

ಒಟ್ಟಾರೆ ಈ ಪಾಳೆಯಗಾರರು ಸಾಕಷ್ಟು ಬಾವಿಗಳನ್ನು ನಿರ್ಮಾಣ ಮಾಡಿರುವುದು ಮೇಲಿನ ಕೆಲವು ಉದಾಹರಣೆಗಳಿಂದ ತಿಳದು ಬರುತ್ತದೆ. ಇಲ್ಲಿ ಪ್ರಮುಖವಾಗಿ ಕುಡಿಯುವ ನೀರಿಗಾಗಿ ನಿರ್ಮಿಸಿದ ಬಾವಿಗಳು ಕೃಷಿಗಾಗಿ ನಿರ್ಮಿಸಿದ ಬಾವಿಗಳು ಹಾಗೂ ಕೃಷಿ ಮತ್ತು ಕುಡಿಯುವ ನೀರಿಗಾಗಿ ನಿರ್ಮಿಸಿದ ಬಾವಿಗಳು ಹೀಗೆ ಮೂರು ರೀತಿಯಲ್ಲಿ ಬಾವಿಗಳು ನಿರ್ಮಾಣಗೊಂಡಿರುವುದು ಕಂಡು ಬರುತ್ತದೆ.

**ಕೊರ್ಲಗುಂದದ ಹಾಲಬಸವೇಶ್ವರ ಬಾವಿ**

ಹಂಡೆ ಪಾಳೆಗಾರರ ಕಾಲದಲ್ಲಿ ನಿರ್ಮಿಸಲ್ಪಟ್ಟ ಈ ಬಾವಿಯು ಸುಮಾರು 16 ಅಡಿಯಷ್ಟು ಚೌಕಾಕಾರವಾಗಿದೆ. ಅಗಲವಾದ ಪಾವಟಿಗೆ ದಾರಿಯಿದೆ. ಬಾವಿಗೆ ಪೂರ್ವದಿಂದಲೂ ಪಾವಟಿಗೆಗಳು ಇವೆ. ಇವುಗಳ ಮುಖಾಂತರ ಪಶ್ಚಿಮದತ್ತ ಇಳಿಯುವಾಗ ಮಂಟಪದ ರೀತಿ ಕಟ್ಟಲಾಗಿದೆ. ಇದನ್ನು ದಾಟಿದರೆ ಪಾವಟಿಗೆಗಳು ಒಮ್ಮೆಲೆ ದಕ್ಷಿಣದತ್ತ ಕೆಳಗಿಳಿಯುತ್ತವೆ. ಪಾವಟಿಗಳನ್ನು ಹಿಡಿದು ಇಡೀ ಬಾವಿಯನ್ನು ಬೆಣಚುಕಲ್ಲಿನಿಂದ ಕಟ್ಟಲಾಗಿದೆ. ದಕ್ಷಿಣ ಗೋಡೆಯಲ್ಲಿ ನೀರನ್ನು ಎತ್ತಿಹಾಕಲು ಏತದ ಬೋದುಗೆಗಳನ್ನು ಅಳವಡಿಸಿದ್ದು ಮೇಲೆ ಏತದ ಬಚ್ಚಲು ಇರುವುದು. ಇದೇ ಗೋಡೆಯಲ್ಲಿ ಎರಡು ಕಮಾನುಗಳನ್ನು ಮಾಡಲಾಗಿದೆ. ಗೋಡೆಗಳ ಮಧ್ಯದಲ್ಲಿ ಅಡ್ಡಪಟ್ಟಿಕೆಗಳನ್ನು ಜೋಡಿಸಲಾಗಿದೆ. ಬಾವಿಯ ಸುತ್ತಲೂ ಅಂದರೆ ಗೋಡೆಯ ಮೇಲೆ ಕುಳಿತುಕೊಳ್ಳಲು ಮತ್ತು ಬಾವಿಯ ಅಂದವನ್ನು ಹೆಚ್ಚಿಸುವ ಸಲುವಾಗಿ ಕಟ್ಟೆಯನ್ನು ಕಟ್ಟಲಾಗಿದೆ. ಈ ಬಾವಿಯ ಇನ್ನೊಂದು ವಿಶೇಷವೆಂದರೆ ಗೋಡೆಯ ಮೇಲಿನ ಉಬ್ಬು ಶಿಲ್ಪಗಳು ಇವುಗಳಲ್ಲಿ ಮನುಷ್ಯ, ಆನೆ, ನಂದಿ, ಲಿಂಗ, ಸಿಂಹ, ಸರ್ಪ, ಮೀನು ಆಮೆ ಇತ್ಯಾದಿ ಉಬ್ಬು ಶಿಲ್ಪಗಳು ನೋಡುಗರನ್ನು ಆಕರ್ಷಿಸುತ್ತವೆ.

**ಕೊರ್ಲಗುಂದದ ನೀಲಮ್ಮನ ಬಾವಿ**

ನೀಲಮ್ಮ ಹೆಸರಿನ ಬಾವಿಯು ಗ್ರಾಮದ ಪಶ್ಚಿಮಕ್ಕೆ ಅರ್ಧ ಕಿ.ಮೀ. ದೂರದಲ್ಲಿದೆ. ಹಾಲಬಸವೇಶ್ವರ ಬಾವಿಕ್ಕಿಂತ ಸ್ವಲ್ಪ ಚಿಕ್ಕದಾಗಿದೆ. ಚೌಕಾಗಿರುವಂತೆ ಬೆಣಚುಕಲ್ಲುಗಳನ್ನು ಬಳಸಿ ಕಟ್ಟಲಾಗಿದೆ.[3] ಬಾವಿಗೆ ದಕ್ಷಿಣ ಬಾಜುವಿನಿಂದ ಇಳಿಯುತ್ತ ಪಶ್ಚಿಮಕ್ಕೆ ಇಳಿದು ಹೋಗಬೇಕು. ಪಾವಟಿಗೆಗಳ ಮಧ್ಯೆ ಒಂದು ಮಂಟಪವಿರುದು. ಪಶ್ಚಿಮ ಗೋಡೆಯಲ್ಲಿ ಏತದ ಬೋದುಗೆಗಳಿದ್ದು, ಮೇಲೆ ಬಚ್ಚಲು ಇದೆ. ಸಂಪೂರ್ಣವಾಗಿ ಈ ಬಾವಿಯ ನೀರನ್ನು ಕೃಷಿ ನೀರಾವರಿಗೆ ಬಳಸಲಾಗುತ್ತದೆ. ಅದರ ಸಫಲತೆಗಾಗಿಯೇ ಈ ಬಾವಿಯನ್ನು ಕಟ್ಟಲಾಗಿದೆ. ಬಾವಿಯ ಗೋಡೆಯ ಮೇಲೆ ಲಜ್ಜಾಗೌರಿ, ಸರ್ಪ, ಆಮೆ, ಮೀನು, ಲಿಂಗ, ನಂದಿ, ಆನೆ ಇತ್ಯಾದಿ ಉಬ್ಬು ಶಿಲ್ಪಗಳಿವೆ. ಈ ಬಾವಿಯನ್ನು ಹಂಡೆ ರಾಮಪ್ಪ ನಾಯಕನ ರಾಣಿ ನೀಲಮ್ಮಳು ಕಟ್ಟಿಸಿದಳೆಂದು ಕೈಫಿಯತ್ತು ಹೇಳುತ್ತದೆ.

**ಪಾರ್ವತಿ ನಗರದ ಬಾವಿ**

ಬಳ್ಳಾರಿಯ ಪಾರ್ವತಿ ನಗರದಲ್ಲಿ ಕಟ್ಟಲಾದ ಬಾವಿಯು ಮೊದಲು ಅಡವಿಯಲ್ಲಿ ಹೊಲದ ನೀರಾವರಿ ಸಲುವಾಗಿ ಕಟ್ಟಿಸಿದಂತಹ ಬಾವಿಯಾಗಿದ್ದು ಈಗ ಬಳ್ಳಾರಿಯ ಊರಲ್ಲಿ ಕಂಡು ಬರುವುದು. ಇದು ನೋಡಲು ಪುಷ್ಕರಣೆಯಂತೆ ಕಂಡು ಬರುತ್ತದೆ. ಗೋಡೆಯನ್ನು ಮೆಟ್ಟಿಲು ರೀತಿಯಲ್ಲಿ ಕಟ್ಟಲಾಗಿದೆ. ಬೆಣಚು ಕಲ್ಲುಗಳನ್ನು ಬಳಸಿ ಅದಾಗ್ಯೂ ಪಶ್ಚಿಮ ಗೋಡೆಯಲ್ಲಿ ಏತದ ಬಚ್ಚಲು ಮಾಡಲಾಗಿದ್ದಂತೆ ಪೂರ್ವಗೋಡೆಯಲ್ಲಿ ಇಳಿಯಲು ಪಾವಟಿಗೆಗಳನ್ನು ಜೋಡಿಸಲಾಗಿದೆ. ನೀರಿನ ಬಳಕೆ ನಿಂತಿದ್ದರಿಂದ ಬಾವಿಯು ಶಿಥಿಲಗೊಂಡು ಸ್ವಲ್ಪ ಹಾಳಾದ ಸ್ಥಿತಿಯಲ್ಲಿದೆ.

**ಅಂದ್ರಾಳು ದೊಡ್ಡಬಾವಿ**

ಅಂದ್ರಾಳುವಿನ ಪೂರ್ವಭಾಗಕ್ಕೆ ಹತ್ತಿಕೊಂಡು ಕಟ್ಟಲಾದ ಬಾವಿಯು ಪ್ರಮಾಣದಲ್ಲಿ ದೊಡ್ಡದಾಗಿದೆ. ಇದರ ಗೋಡೆಯನ್ನು ಕಟ್ಟಲು ಬೆಣಚುಕಲ್ಲುಗಳನ್ನೇ ಬಳಸಲಾಗಿದೆ. ಉತ್ತರ ಗೋಡೆಯಲ್ಲಿ ಏತದ ಬೋದುಗೆಗಳಿದ್ದು ಮೇಲೆ ಬಚ್ಚಲು ಇದೆ. ಬಾವಿಗೆ ಪೂರ್ವದಿಂದಲೂ ಇಳಿಯುತ್ತಾ ಉತ್ತರಕ್ಕೆ ತಿರುಗಿ ಇಳಿಯುವಂತೆ ಪಾವಟಿಗಳನ್ನು ಜೋಡಿಸಲಾಗಿದೆ. ಈ ಪಾವಟಿಗಳ ಹತ್ತಿರದಲ್ಲಿ ಪೂರ್ವಾಭಿಮುಖ ಮಾಡಿ ಚಿಕ್ಕ ಗುಡಿಯನ್ನು ಕಟ್ಟಲಾಗಿದೆ. ಬಾವಿಯ[4] ಗೋಡೆಗಳ ಮೇಲೆ ಪ್ರಾಣಿ, ಪಕ್ಷಿ, ಸ್ತ್ರೀ ಪುರುಷ ಹಾಗೂ ಮಿಥುನ ಶಿಲ್ಪಗಳಿವೆ. ಇಂತಹುದೇ ಬಾವಿಯು ಅಂದ್ರಾಳು ಇಬ್ರಾಹಂಪುರ ರಸ್ತೆಯ ಮೇಲ್ಗಡೆ ಇರುವುದು. ಈ ಬಾವಿಯು ಸಹ ಚೌಕಾಕಾರವಾಗಿದ್ದು, ಪಾವಟಿಗೆಗಳನ್ನು ಇಳಿಯುವಾಗ ಕಂಬದ ಮಟ್ಟದ ಮತ್ತು ದೇವರಗುಡಿಗಳನ್ನು ಮಗ್ಗಲಿನ ಗೋಡೆಗಳಲ್ಲಿ ಮಾಡಲಾಗಿದೆ. ಇದಕ್ಕೂ ಕೂಡ ಏತದ ಬಚ್ಚಲು ಇರುವುದು. ಈ ಬಾವಿಯನ್ನು ಹನುಮಪ್ಪ ನಾಯಕನು ಕಟ್ಟಿಸಿದ ಉಲ್ಲೇಖ ನಮಗೆ ದೊರೆಯುತ್ತದೆ.

**ಶಿವಧಾರ್‌ದವರ ಬಾವಿ (ಸ್ವಾಮಿಯವರ ಬಾವಿ)**

ಇದು ಪಿಂಜಾರ್ ಓಣಿಯ ಮುಂದೆ ಒಂದು ಮನೆಯಲ್ಲಿ ಸಂರಕ್ಷಣೆ ಮಾಡುತ್ತಿರುವುದನ್ನು ನಾವು ಕಾಣಬಹುದು. ಹಳೆ ಕಾಲದಲ್ಲಿ ಈ ಬಾವಿಗಳನ್ನು ಕುಡಿಯುವ ನೀರಿಗಾಗಿ ಬಳಸುತ್ತಿದ್ದರು. ಕಾಲಾನಂತರದಲ್ಲಿ ಅದರಲ್ಲಿ ನೀರು ಕಡಿಮೆಯಾಗಿ ಕೆಲವು ದಿನ ಬರದೆ, ನಂತರ ಬಂದಾಗ ಅದನ್ನು ಬಳಸುತ್ತಾರೆ. ಈಗ ಅದನ್ನು ಮೂಲಭೂತ ಸೌಲಭ್ಯಕ್ಕಾಗಿ ಬಳಸುತ್ತಾರೆ. 40 ಅಥವಾ 45 ವರ್ಷಗಳ ಹಿಂದೆ ಇದನ್ನು ಹೆಚ್ಚಾಗಿ ಬಳಸುತ್ತಿದ್ರು. ಈಗ ಇದರ ಬಳಕೆ ಕಡಿಮೆಯಾಗಿದೆ. ಕೊಳಾಯಿಗಳು ಬಂದ ನಂತರ ಈ ಬಾವಿಯ ನೀರಿನ ಬಳಕೆ ಕಡಿಮೆಯಾಗಿದೆ. ಇದರಲ್ಲಿ ಹೂವು, ಕಾಗದ, ಕಸಕಡ್ಡಿ ಮುಂತಾದ ತ್ಯಾಜ್ಯಗಳನ್ನು ಜನರು ಎಸೆಯುತ್ತಾ ಮಲಿನಗೊಳಿಸಿದ್ದಾರೆ. ನೀರು ಮಲಿನವಾಗದಂತೆ ಶಿವಧಾರ್ ಅವರು ಗೋಡೆಯನ್ನು ನಿರ್ಮಿಸಿ ಬಾವಿಯನ್ನು ಸಂರಕ್ಷಣೆ ಮಾಡಿದ್ದಾರೆ. ಬೇಸಿಗೆ ಕಾಲದಲ್ಲಿ ಈ ಬಾವಿಯ ನೀರನ್ನು ಜನತೆ ಬಳಸುತ್ತಾರೆ. ಇದು ತುಂಬಾ ಆಳವಾಗಿದ್ದು, ಇದನ್ನು ನಾವು ಚೌಕಾಕಾರದಲ್ಲಿ ಕಾಣಬಹುದು.

**ಪಿಂಜಾರ್ ಓಣಿ ಬಾವಿ (ಹಳೇ ಮಸೀದಿ ಬಾವಿ)**

ಪಿಂಜಾರ್ ಓಣಿಯಲ್ಲಿರುವ ಈ ಬಾವಿಯಲ್ಲಿ ಸಿಹಿ ನೀರನ್ನು ಕಾಣಬಹುದು. ಈ ಬಾವಿಗೆ 100 ವರ್ಷ ಮೇಲ್ಪಟ್ಟು ಇತಿಹಾಸವಿದೆ. ಇದನ್ನು ಜುಮ್ಮಾ ಮಸೀದಿ ಬೀದಿ ಹಳೇ ಮಸೀದಿ ಹತ್ತಿರ ನಿರ್ಮಿಸಲಾಗಿದೆ. ಇದನ್ನು ಹಳೇ ಮಸೀದಿ ಬಾವಿ ಎಂದು ಕರೆಯಲಾಗುತ್ತದೆ. ಇದು ಐತಿಹಾಸಿಕ ಬಾವಿಗಳಲ್ಲಿ ಒಂದಾಗಿದೆ. ಇದನ್ನು ಮಹಾನಗರ ಪಾಲಿಕೆಯವರು ಈ ಬಾವಿಗೆ ಪುನರುಜ್ಜೀವನ ನೀಡಿ ಸಂರಕ್ಷಿಸಿದ್ದಾರೆ. ಸದರಿ ಬಾವಿಯು ಪಾಲಿಕೆಯ ಒಂದನೇ ವಾರ್ಡಿನಲ್ಲಿದೆ.

**ಬ್ರಿಟಿಷರ ಕಾಲದ ಬಾವಿಗಳು**

ಬಳ್ಳಾರಿ ನಗರದಲ್ಲಿ ರಾಜಮಹಾರಾಜರು ಮತ್ತು ಪಾಳೆಯಗಾರರ ಕಾಲದ ಬಾವಿಗಳು ಮಾತ್ರ ನಿರ್ಮಾಣವಾಗಿಲ್ಲ. ಬ್ರಿಟಿಷರು ಬಳ್ಳಾರಿ ನಗರದಲ್ಲಿ 18ನೇ ಶತಮಾನದಲ್ಲಿ ಕಂಟೋನ್ಮೆಂಟನ್ನು ಸ್ಥಾಪನೆ ಮಾಡಿದ ನಂತರ ಇಲ್ಲಿ ಸೈನಿಕರಿಗೆ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ಬಾವಿಗಳನ್ನು ತೋಡಿಸಿದ್ದಾರೆ. ಅವುಗಳಲ್ಲಿ ಕುದುರೆಗಳಿಗೆ ನೀರು ಕುಡಿಸಲು ಪ್ರತ್ಯೇಕ ಬಾವಿಗಳು ಮತ್ತು ಸೈನಿಕರು ಕುಡಿಯುವುದಕ್ಕೆ ಬಳಸಲು ಪ್ರತ್ಯೇಕ ನೀರಿನ ಕುಂಟೆಗಳನ್ನು ಕಾಣುತ್ತೇವೆ. ಅವುಗಳಲ್ಲಿ ಬೆಳಗಲ್ಲು ಕ್ರಾಸ್ ಸಮೀಪದ "ಕೇಡರ ಕುಂಟೆ" ಇದೆ. ಈ ಸ್ಥಳದಲ್ಲಿ ಕುಂಟೆಯನ್ನು ಕಾಯುವುದಕ್ಕಾಗಿಯೇ ಒಬ್ಬ ಕಾವಲುಗಾರರನ್ನು ನೇಮಿಸಲಾಗುತ್ತಿತ್ತು. ಏಕೆಂದರೆ ಯಾರಾದರೂ ನೀರಿನಲ್ಲಿ ವಿಷ ಬೆರೆಸಬಹುದು ಎಂಬ ಅನುಮಾನಗಳು ಬ್ರಿಟಿಷ್ ಅಧಿಕಾರಿಗಳನ್ನು ಕಾಡುತ್ತಿತ್ತು. ಹಾಗಾಗಿ ಇಲ್ಲಿ ಕಾವಲುಗಾರರನ್ನು ನೇಮಿಸಲಾಗುತ್ತಿತ್ತು.

**ಸೈನಿಕರ ದೊಡ್ಡಬಾವಿ**

ಈ ಬಾವಿಯು ಬಂಡಿಹಟ್ಟಿ ಸಮೀಪದಲ್ಲಿದ್ದು, ಇದು ಈಗ ನಿತ್ಯಾನಂದ ಆಶ್ರಮದಲ್ಲಿದೆ. ಬ್ರಿಟಿಷರು ಕುದುರೆಗಳಿಗೆ ನೀರು ಕುಡಿಸಲೆಂದೇ ಬಾವಿಯನ್ನು ತೋಡಿಸಿದ್ದರೆಂದು ಸ್ಥಳೀಯರು[5] ಹೇಳುತ್ತಾರೆ. ಅಲ್ಲದೆ ಈ ಬಾವಿಯನ್ನು 70 ರೂಪಾಯಿಗಳಿಗೆ ಬಂಡಿಹಟ್ಟಿ ಗ್ರಾಮಸ್ಥರು ಖರೀದಿಸಿದ್ದರೆಂದು ಸಹ ಹೇಳಲಾಗುತ್ತಿದೆ.

**ಮನೆಗಳಲ್ಲಿ ಬಾವಿಗಳು**

ಬಳ್ಳಾರಿ ನಗರದ ಹಳೆಯ ಊರಿನಲ್ಲಿ ಅಂದರೆ ಕೌಲ್‌ಬಜಾರಿನ ರೇಡಿಯೋ ಪಾರ್ಕ್‌ನಲ್ಲಿ ಬಹುತೇಕ ಮನೆಗಳಲ್ಲಿ ಸ್ವತಂತ್ರವಾಗಿ ಬಾವಿಗಳನ್ನು ಜನತೆ ಹೊಂದಿದ್ದಾರೆ. ನಂತರ ಸತ್ಯನಾರಾಯಣ ಪೇಟೆಯಲ್ಲಿಯೂ[6] ಮನೆಗಳಲ್ಲಿ ಬಾವಿಗಳಿರುವುದನ್ನು ಕಾಣುತ್ತೇವೆ. ಪ್ರಾಚೀನ ಕಾಲದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಜನತೆ ತಮ್ಮದೇ ಆದ ರೀತಿಯಲ್ಲಿ ಕಂಡುಕೊಂಡಿರುವುದನ್ನು ಕಾಣುತ್ತೇವೆ. ಎಲ್ಲಿ ನೀರು ಲಭ್ಯವಿದೆಯೋ ಅಲ್ಲಿಯೇ ನಾಗರಿಕತೆ ಮತ್ತು ಗ್ರಾಮಗಳು, ಪಟ್ಟಣಗಳು, ನಗರಗಳು ಉದಯಿಸಿರುವುದನ್ನು ಕಾಣುತ್ತೇವೆ.

**ಉಪಸಂಹಾರ**

ಹೀಗೆ ಬಳ್ಳಾರಿಯಲ್ಲಿ ಪ್ರಾಚೀನ ಬಾವಿಗಳು ದೊರೆಯುತ್ತವೆ. ಅವುಗಳು ಆಯಾ ಕಾಲಘಟ್ಟದಲ್ಲಿ ರಾಣಿಯರ ನೆನಪಿಗಾಗಿಯೋ ಅಥವಾ ಜನರಿಗೆ ಕುಡಿಯುವ ನೀರಿನ ದಾಹವನ್ನು ತಣಿಸಲು ನಿರ್ಮಿಸಲಾಗಿರುವ ಈ ಬಾವಿಗಳು ಚಾರಿತ್ರಿಕ ದೃಷ್ಟಿಯಿಂದ ಮಹತ್ವವನ್ನು ಪಡೆದುಕೊಂಡಿವೆ. ಅಂದಿನ ರಾಜ ಮಹಾರಾಜರು ಕೇವಲ ಬಾವಿಗಳನ್ನು ತೋಡಿಸುವುದಲ್ಲದೆ ಬಾವಿಯ ಗೋಡೆ, ಮೆಟ್ಟಿಲು ಅವುಗಳನ್ನು ಸುಂದರವಾಗಿ ಕಲಾತ್ಮಕವಾಗಿ ನಿರ್ಮಾಣ ಮಾಡಿರುವುದೇ ಅತ್ಯಂತ ವಿಶಿಷ್ಟವಾಗಿ ಕಂಡು ಬರುತ್ತದೆ.

**ಕೊನೆಟಿಪ್ಪಣಿ**

1. ಪಾಟೀಲ್. ಎಸ್.ಸಿ. (2014). *ಹಂಡೆ ಅರಸರ ಇತಿಹಾಸ ಮತ್ತು ಪರಂಪರೆ.* ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ. ಪು.ಸಂ.185
2. ಅದೇ ಪು.ಸಂ. 187
3. ಅದೇ ಪು.ಸಂ. 188
4. ವಕ್ತೃ: ಹೊನ್ನೂರಪ್ಪ ಅಂದ್ರಾಳ್. (2020 ಜನವರಿ, 20). ವಯಸ್ಸು 72, ಸ್ಥಳೀಯ ನಿವಾಸಿ, ಆಂದ್ರಾಳ್ ಬಳ್ಳಾರಿ.
5. ವಕ್ತೃ: ಡಾ. ಕೆ. ಬಸಪ್ಪ ಬಂಡಿಹಟ್ಟಿ (2020 ಜನವರಿ, 14). ಪ್ರಾಧ್ಯಾಪಕರು, ಪದವಿ ಕಾಲೇಜು, ಸಂಗಮ್ ಸರ್ಕಲ್, ಬಳ್ಳಾರಿ
6. ವಕ್ತೃ: ಕುಮಾರರೆಡ್ಡಿ (2020 ಜನವರಿ, 20) ವಯಸ್ಸು 65, ನಿವೃತ್ತ ಮುಖ್ಯೋಪಾಧ್ಯಾಯರು, ಬೆಳಗಲ್ಲು ಕ್ರಾಸ್, ಬಳ್ಳಾರಿ.

**ಪರಾಮರ್ಶನ ಗ್ರಂಥಗಳು**


- ಹನುಮಂತರೆಡ್ಡಿ, ವೈ. (2008). *ಬಳ್ಳಾರಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ.* ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳ.
- ಹನುಮಂತರೆಡ್ಡಿ, ವೈ. (2011). *ಬಲಕುಂದಿ ಮುನ್ನೂರು ನಾಡಿನ ಸಾಂಸ್ಕೃತಿಕ ಇತಿಹಾಸ.* ಅನ್ನಪೂರ್ಣ ಪ್ರಕಾಶನ.
- ನಾಗಯ್ಯ, ಜೆ.ಎಂ. (2002). *ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ.* ಲೋಹಿಯ ಪ್ರಕಾಶನ.
- ವಾಸುದೇವ ಬಡಿಗೇರ. (2012). *ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ವಿನೋದ ಪಾಟೀಲ್. (2006). *ಕರ್ನಾಟಕದ ಪ್ರಾಚೀನ ಬಾವಿಗಳು.* ಮೈಸೂರು ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆ.
- ವಿರುಪಾಕ್ಷಿ ಪೂಜಾರಹಳ್ಳಿ. *ವಸಾಹತುಕಾಲೀನ ಬಳ್ಳಾರಿ ಜಿಲ್ಲೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.